## ಕರ್ನಾಟಕ ಸರ್ಕಾರ

## ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಕೆ.ಆರ್.ವೃತ್ತ, ಬೆಂಗಳೂರು

## ಅಧಿಸೂಚನೆ

**NO: SSLR/PMU/LS/LS-040/2015-16** **ದಿನಾಂಕ: 21.12.2019.**

1. ರಾಜ್ಯದಲ್ಲಿ ಪೋಡಿ ಮುಕ್ತ ಅಭಿಯಾನ ಯೋಜನೆಯನ್ನು ಅನುಷ್ಠಾನಗೊಳಿಸುವ ಹಾಗೂ 11-ಇ ನಕ್ಷೆ, ತತ್ಕಾಲ್ ಪೋಡಿ ಪ್ರಕರಣಗಳ ಅಳತೆ ಕಾರ್ಯ ನಿರ್ವಹಿಸಿ ನಕ್ಷೆಯನ್ನು ವಿಳಂಬವಿಲ್ಲದೆ ಒದಗಿಸುವ ಸಲುವಾಗಿ 6770 ಅರ್ಹ ಅಭ್ಯರ್ಥಿಗಳಿಗೆ ಭೂಮಾಪನ ಪರವಾನಗಿ ನೀಡಲು ಸರ್ಕಾರದ ಅನುಮೋದನೆ ದೊರೆತಿರುತ್ತದೆ. ಕ್ರಮ ಸಂಖ್ಯೆ 8 ರಲ್ಲಿ ನೀಡಿರುವ ಜಿಲ್ಲೆಗಳಲ್ಲಿ ಪರವಾನಗಿ ನೀಡುವ ಅಗತ್ಯತೆ ಕಂಡುಬಂದಿರುವ ಕಾರಣ 2055 ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲು Online ಮುಖಾಂತರ ಅರ್ಜಿಯನ್ನು ಆಹ್ವಾನಿಸಲಾಗಿದೆ.
2. ಪರವಾನಗಿ ನೀಡಲಾದ ಭೂಮಾಪಕರಿಗೆ ಸರ್ಕಾರದ ಆದೇಶ ಸಂಖ್ಯೆ:ಕಂಇ 279 ಭೂದಾಸ 2011, ಬೆಂಗಳೂರು ದಿನಾಂಕ:21-10-2013 ರಲ್ಲಿ ನಿಗದಿಪಡಿಸಿರುವಂತೆ ಪ್ರತಿ ಅಳತೆ ಕಾರ್ಯಕ್ಕೆ ಇಲಾಖೆಯಿಂದ ಸೇವಾ ಶುಲ್ಕವನ್ನು ನೀಡಲಾಗುವುದು.
3. ಭೂಮಾಪಕನ ಕೆಲಸ ನಿರ್ವಹಿಸಲು ಪರವಾನಗಿ ನೀಡುವ ಪ್ರಕ್ರಿಯೆಯಲ್ಲಿ ಮೊದಲು ಸ್ಪರ್ಧಾತ್ಮಕ ಪರೀಕ್ಷೆಯನ್ನು ನಿರ್ದಿಷ್ಟಪಡಿಸಿದ ಜಿಲ್ಲಾ ಕೇಂದ್ರಗಳಲ್ಲಿ ಫೆಬ್ರವರಿ ಅಥವಾ ಮಾರ್ಚ್-2020 ರಲ್ಲಿ ಕೊನೆಯ ವಾರದಲ್ಲಿ ನಡೆಸಲು ಉದ್ದೇಶಿಸಿದೆ. ಪರೀಕ್ಷೆಯ ಖಚಿತ ದಿನಾಂಕವನ್ನು ವೆಬ್ ಸೈಟ್ ವಿಳಾಸವಾದ landrecords.karnataka.gov.in/LSrecruitment ರಲ್ಲಿ ಮತ್ತು ದಿನಪತ್ರಿಕೆಗಳಲ್ಲಿ 15 ದಿನ ಮುಂಚಿತವಾಗಿ ಪ್ರಚುರಪಡಿಸಲಾಗುವುದು. ನಿಗದಿಪಡಿಸಲಾದ ಅರ್ಜಿಗಳನ್ನು ಸಹ ಇಲಾಖಾ ವೆಬ್ ಸೈಟಿನಲ್ಲಿಯೇ ಪ್ರಕಟಿಸಲಾಗಿದೆ. ಅರ್ಜಿಗಳನ್ನು ಆನ್ ಲೈನ್ (Online) ಮುಖಾಂತರ ಸಲ್ಲಿಸತಕ್ಕದ್ದು. ಒಬ್ಬ ಅಭ್ಯರ್ಥಿಯು ಆನ್ ಲೈನ್ ನಲ್ಲಿ ಒಂದು ಅರ್ಜಿಯನ್ನು ಸಲ್ಲಿಸುವುದಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿರುತ್ತದೆ. ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ. ಅಪೂರ್ಣವಾದ ಅಥವಾ ನಿಯಮಗಳನ್ನು ಪಾಲಿಸದ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ಇಲ್ಲದೆ ತಿರಸ್ಕರಿಸಲಾಗುವುದು.

   **ಆನ್ ಲೈನ್ ಮೂಲಕ ಅರ್ಜಿಗಳನ್ನು at www.landrecords.karnataka.gov.in/LSrecruitment ನಲ್ಲಿ ದಿನಾಂಕ: 21-01-2020 ರ ಸಂಜೆ 5-00 ಗಂಟೆಯ ಒಳಗೆ ಸಲ್ಲಿಸಲು ಕೊನೆಯ ದಿನವಾಗಿರುತ್ತದೆ.**

4. **ಶುಲ್ಕ : ರೂ 500/-**

ಅಭ್ಯರ್ಥಿಗಳು ನಾಡ ಕಛೇರಿಯ ಅಟಲ್ ಜಿ ಜನಸ್ನೇಹಿ ಕೇಂದ್ರಗಳಲ್ಲಿ ತಮ್ಮ ಚುನಾವಣಾ ಗುರುತಿನ ಚೀಟಿ ಅಥವಾ ಆಧಾರ್ ಗುರುತಿನ ಚೀಟಿ ನೀಡಿ ರೂ 500/- ಶುಲ್ಕವನ್ನು ಪಾವತಿಸಿ, ವಿಶಿಷ್ಟ ಅರ್ಜಿ ಸಂಖ್ಯೆಯನ್ನು (Application ID) ಹೊಂದಿರುವ ಸ್ವೀಕೃತಿ ಪತ್ರ ಪಡೆಯಬೇಕು. ವಿಶಿಷ್ಟ ಅರ್ಜಿ ಸಂಖ್ಯೆ (Application ID) ಇಲ್ಲದೆ ಇದ್ದಲ್ಲಿ ಆನ್ ಲೈನ್ ಅರ್ಜಿ ತೆರೆಯುವುದಿಲ್ಲ.

**ಸೂಚನೆ:-** ಶುಲ್ಕ ಪಾವತಿಸುವಾಗ ತಮ್ಮ ಆಧಾರ್ ಕಾರ್ಡ್ ಅಥವಾ ಚುನಾವಣಾ ಗುರುತಿನ ಚೀಟಿಯನ್ನು ತಪ್ಪದೆ ಹಾಜರುಪಡಿಸಬೇಕು. ಗುರುತಿನ ಚೀಟಿಯ ಸಂಖ್ಯೆ ತಪ್ಪಾಗಿ ದಾಖಲಾದಲ್ಲಿ ಅರ್ಜಿ ಶುಲ್ಕದ ಮೊತ್ತವನ್ನು ಯಾವುದೇ ಸಂದರ್ಭದಲ್ಲಿ ಅಭ್ಯರ್ಥಿಗೆ ಹಿಂದಿರುಗಿಸುವುದಾಗಲೀ ಅಥವಾ ಬೇರೆ ಅರ್ಜಿಗೆ ಹೊಂದಾಣಿಕೆ ಮಾಡಿಕೊಳ್ಳಲು ಅವಕಾಶವಿರುವುದಿಲ್ಲವಾದ ಕಾರಣ, ಶುಲ್ಕ ಪಾವತಿಸುವಾಗ ಎಚ್ಚರಿಕೆಯಿಂದ ಗುರುತಿನ ಚೀಟಿ ಸಂಖ್ಯೆಯನ್ನು ನೀಡಲು ಸೂಚಿಸಿದೆ. ಶುಲ್ಕ ಪಾವತಿಸಿದ ಸ್ವೀಕೃತಿ ಪತ್ರವನ್ನು ಸ್ಥಳದಲ್ಲಿಯೇ ಪರಿಶೀಲಿಸಿಕೊಳ್ಳಲು ಸಹ ಸೂಚಿಸಿದೆ.



21/12/19

5. ಅರ್ಜಿಯನ್ನು ಆನ್ ಲೈನ್ ಮುಖೇನ ಸಲ್ಲಿಸುವ ವಿಧಾನ :

**<u>ಹಂತ 1:-</u>** ಅಭ್ಯರ್ಥಿಗಳು ನಾಡಕಛೇರಿಯಲ್ಲಿ ಚುನಾವಣಾ ಗುರುತಿನ ಚೀಟಿ ಸಂಖ್ಯೆ ಅಥವಾ ಆಧಾರ್ ಸಂಖ್ಯೆಯನ್ನು ನೀಡಿ ನಿಗದಿತ ಶುಲ್ಕವನ್ನು ಪಾವತಿಸಿದಾಗ ನೀಡುವ ಸ್ವೀಕೃತಿ ಪತ್ರವನ್ನು ಜೊತೆಯಲ್ಲಿಟ್ಟುಕೊಂಡು ಇಲಾಖಾ ವೆಬ್ ಸೈಟ್ ವಿಳಾಸವಾದ "landrecords.karnataka.gov.in/LSrecruitment" ನ್ನು ಪ್ರವೇಶಿಸಿ, LICENSE SURVEYORS SELECTION-2019 ಎಂಬ ಲಿಂಕ್‌ನ್ನು ಕ್ಲಿಕ್ ಮಾಡಿದಾಗ ಅಧಿಸೂಚನೆ (NOTIFICATION) ಮತ್ತು ಅನ್ ಲೈನ್ ಅರ್ಜಿ (ONLINE APPLICATION) ಗಳು ಮೂಡುತ್ತವೆ. ಅಧಿಸೂಚನೆಯನ್ನು ಡೌನ್ ಲೋಡ್ ಮಾಡಿಕೊಳ್ಳಲು ಅವಕಾಶವಿರುತ್ತದೆ. ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಅಧಿಸೂಚನೆಯನ್ನು ಓದಿ ಅರ್ಥೈಸಿಕೊಳ್ಳತಕ್ಕದ್ದು.

**<u>ಹಂತ 2:-</u>** ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು ONLINE APPLICATION ಲಿಂಕ್ ನ್ನು ಕ್ಲಿಕ್ ಮಾಡಿ ಅಥವಾ landrecords.karnataka.gov.in/Service201 ಲಿಂಕ್ ನ್ನು ಪ್ರವೇಶಿಸಿ, ಶುಲ್ಕ ಪಾವತಿಸಿದ ಸ್ವೀಕೃತಿ ಪತ್ರದಲ್ಲಿನ ವಿಶಿಷ್ಟ ಅರ್ಜಿ ಸಂಖ್ಯೆ (Application ID) ಯನ್ನು ಆನ್ ಲೈನ್ ಅರ್ಜಿಯ USER ID ಅಂಕಣದಲ್ಲಿ ಭರ್ತಿ ಮಾಡಿ ಶುಲ್ಕ ಪಾವತಿಸುವ ಸಂದರ್ಭದಲ್ಲಿ ಹಾಜರುಪಡಿಸುವ ಚುನಾವಣಾ ಗುರುತಿನ ಚೀಟಿ ಅಥವಾ ಆಧಾರ್ ಗುರುತಿನ ಚೀಟಿಯ ಸಂಖ್ಯೆಯನ್ನು PASSWORD ಅಂಕಣದಲ್ಲಿ ಭರ್ತಿ ಮಾಡಬೇಕು. ನಂತರ Submit ಬಟನ್ ಒತ್ತಿದರೆ ಆನ್ ಲೈನ್ ಅರ್ಜಿ ಪ್ರದರ್ಶಿತವಾಗುತ್ತದೆ.

**<u>ಹಂತ 3:-</u>** ಆನ್ ಲೈನ್ ಅರ್ಜಿ ಸಲ್ಲಿಸುವ ಮೊದಲು ಅಭ್ಯರ್ಥಿಯ ಪಾಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಬಿಳಿ ಹಾಳೆಯ ಮೇಲೆ ಅಂಟಿಸಿ, ಭಾವಚಿತ್ರದ ಕೆಳಗೆ (ಹಾಳೆಯ ಮೇಲೆ) ಪೂರ್ಣ ಸಹಿ ಮಾಡಿದ ನಂತರ ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡಲು (size 10 to 50 KB) ಸಿದ್ಧತೆ ಮಾಡಿಕೊಳ್ಳಬೇಕು. ಅರ್ಜಿ ತೆರೆಯುವ ಮೊದಲು ಭಾವಚಿತ್ರ ಹಾಗೂ ಸಹಿಯ ಸ್ಕ್ಯಾನಿಂಗ್ ಕಾರ್ಯ ಪೂರ್ಣಗೊಳಿಸಬೇಕು ಮತ್ತು ಅದರ ಸೈಜ್ ನ್ನು ಕಡ್ಡಾಯವಾಗಿ ಖಾತರಿಪಡಿಸಿಕೊಳ್ಳಬೇಕು.

**<u>ಹಂತ 4:-</u>** ಆನ್ ಲೈನ್ ಅರ್ಜಿಯು ಎರಡು ಪುಟವಿದ್ದು ಮೊದಲನೆಯ ಪುಟವನ್ನು ಭರ್ತಿ ಮಾಡಿದ ನಂತರ Next ಬಟನ್ ಒತ್ತಿದರೆ ಎರಡನೆಯ ಪುಟ ಪ್ರದರ್ಶಿತವಾಗುತ್ತದೆ. ಎರಡನೆಯ ಪುಟವನ್ನು ಭರ್ತಿ ಮಾಡಿದ ನಂತರ Proceed ಬಟನ್ ಒತ್ತಿದರೆ ಭರ್ತಿಯಾದ ಸಂಪೂರ್ಣ ಅರ್ಜಿ ಪ್ರದರ್ಶಿತವಾಗುತ್ತದೆ. ಯಾವುದೇ ತಿದ್ದುಪಡಿ ಇದ್ದಲ್ಲಿ EDIT ಬಟನ್ ಒತ್ತಿ ಸಂಬಂಧಿಸಿದ ಅಂಕಣಗಳಲ್ಲಿ ಮಾಹಿತಿಯನ್ನು ಸರಿಪಡಿಸಿದ ನಂತರ Proceed ಬಟನ್ ಒತ್ತಿದರೆ ಪ್ರದರ್ಶಿತವಾಗುವ ಅರ್ಜಿಯಲ್ಲಿನ ಎಲ್ಲಾ ಮಾಹಿತಿಯನ್ನು ಸರಿ ಇದೆ ಎಂದು ಖಾತರಿಪಡಿಸಿಕೊಂಡು, ಅಂತಿಮವಾಗಿ ಇರುವ ಘೋಷಣೆ (DECLARATION) ಯನ್ನು ಕಡ್ಡಾಯವಾಗಿ ಓದಿಕೊಂಡು ☐ ಚೌಕದಲ್ಲಿ ಕ್ಲಿಕ್ ಮಾಡಿದಾಗ ☑ ಎಂದು ಮೂಡುತ್ತದೆ. ಈ ರೀತಿ ಚೌಕದಲ್ಲಿ ಕ್ಲಿಕ್ ಮಾಡಿದಾಗ ಅರ್ಜಿಯಲ್ಲಿ ಭರ್ತಿ ಮಾಡಿರುವ ಎಲ್ಲಾ ಮಾಹಿತಿಗಳು ಸರಿ ಇದೆ ಎಂದು ಒಪ್ಪಿ ದೃಢೀಕರಿಸಿದಂತೆ ಎಂದು ಭಾವಿಸಲಾಗುತ್ತದೆ. ಅಲ್ಲದೆ ಅರ್ಜಿ ಸಲ್ಲಿಸಲು ಅಗತ್ಯವಿರುವ ಹೈಡ್ ಆಗಿದ್ದ Submit ಬಟನ್ ತೆರೆಯುತ್ತದೆ. Submit ಬಟನ್ ಒತ್ತಿದಾಗ ಆನ್ ಲೈನ್ ಅರ್ಜಿ ಸಲ್ಲಿಸುವ ಕ್ರಮ ಪೂರ್ಣಗೊಂಡಂತೆ. ಒಮ್ಮೆ Submit ಬಟನ್ ಒತ್ತಿದ ನಂತರ ಅರ್ಜಿಯಲ್ಲಿನ ಯಾವುದೇ ಮಾಹಿತಿಯನ್ನು ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ. ಆದುದರಿಂದ <u>**Submit** ಬಟನ್ ಒತ್ತುವ ಮೊದಲು, ಅರ್ಜಿಯಲ್ಲಿ ಭರ್ತಿ ಮಾಡಿರುವ ಎಲ್ಲಾ ಮಾಹಿತಿಯನ್ನು ಖಾತರಿಪಡಿಸಿಕೊಂಡು, ನಂತರ **Submit** ಬಟನ್ ಒತ್ತಬೇಕು.</u>

**<u>ಹಂತ 5:-</u>** ಆನ್ ಲೈನ್ ಅರ್ಜಿಯನ್ನು ಸಂಪೂರ್ಣವಾಗಿ ಭರ್ತಿ ಮಾಡಿ Submit ಮಾಡಿದ ನಂತರ ಪರದೆಯ ಮೇಲೆ ಮೂಡಿರುವ Print ಬಟನ್ ನ್ನು ಒತ್ತಬೇಕು. ಆಗ ಆನ್ ಲೈನ್ ಅರ್ಜಿಯ Print Preview ಮೂಡುತ್ತದೆ. Print

ಬಟನನ್ನು ಒತ್ತಿ ಆನ್ ಲೈನ್ ಅರ್ಜಿಯ ಪ್ರತಿಯನ್ನು ಪಡೆಯಬೇಕು. ಅರ್ಜಿಯನ್ನು Print ತೆಗೆದುಕೊಂಡ ನಂತರ Exit ಬಟನನ್ನು ಒತ್ತಬೇಕು.

- ಆನ್ ಲೈನ್ ಅರ್ಜಿಯನ್ನು ಭರ್ತಿ ಮಾಡುವ ಮೊದಲು ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆಯ ದಾಖಲೆಗಳನ್ನು ಮತ್ತು ಮೀಸಲಾತಿ ಕೋರುವ ಸಂಬಂಧದ ದಾಖಲೆಗಳನ್ನು ಪರಿಶೀಲಿಸಿ ಎಲ್ಲಾ ದಾಖಲೆಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ ನಿಮ್ಮ ಹತ್ತಿರ ಇಟ್ಟುಕೊಂಡು ಭರ್ತಿ ಮಾಡುವುದು ಸೂಕ್ತವಾಗಿರುತ್ತದೆ.
- ಅರ್ಜಿಯನ್ನು Submit ಮಾಡಿದ ನಂತರ ಯಾವುದೇ ತಿದ್ದುಪಡಿಗಳಿಗೆ ಅವಕಾಶವಿರುವುದಿಲ್ಲ.
- ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ವಿಳಂಬ ಮಾಡದೆ, ಮುಂಚಿತವಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.
- ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗುವ ಸಂದರ್ಭದಲ್ಲಿ ಅಭ್ಯರ್ಥಿಯು ಪಡೆದಿರುವ ಅರ್ಜಿಯ ಪ್ರತಿಯನ್ನು ಕಡ್ಡಾಯವಾಗಿ ಹಾಜರುಪಡಿಸಬೇಕು.

6. **ಶೈಕ್ಷಣಿಕ ವಿದ್ಯಾರ್ಹತೆ:**

A. ಕನಿಷ್ಠ ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ.) ಅಥವಾ ಕೇಂದ್ರ ಪ್ರೌಢ ಶಿಕ್ಷಣ ಮಂಡಳಿ ಜರುಗಿಸುವ 12ನೇ ತರಗತಿ ಸಿ.ಬಿ.ಎಸ್.ಇ. ಅಥವಾ ಐ.ಸಿ.ಎಸ್.ಇ. ಇವುಗಳಲ್ಲಿ ವಿಜ್ಞಾನ ವಿಷಯವನ್ನು ಪಡೆದು ಗಣಿತ ವಿಷಯದಲ್ಲಿ 60% ಕ್ಕಿಂತ ಕಡಿಮೆ ಇಲ್ಲದಂತೆ ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು ಅಥವಾ

B. ಭಾರತದಲ್ಲಿ ಕಾನೂನು ರೀತ್ಯ ಸ್ಥಾಪಿತವಾದ ಯಾವುದೇ ವಿಶ್ವವಿದ್ಯಾಲಯದಲ್ಲಿ ಬಿ.ಇ.(ಸಿವಿಲ್) / ಅಥವಾ ಬಿ.ಟೆಕ್. (ಸಿವಿಲ್) / ಅಥವಾ ಸಿವಿಲ್ ಇಂಜಿನೀಯರಿಂಗ್ ಡಿಪ್ಲೋಮಾದಲ್ಲಿ ಉತ್ತೀರ್ಣರಾಗಿರುವವರೂ ಸಹ ಅರ್ಜಿ ಸಲ್ಲಿಸಬಹುದು.

C. ಕರ್ನಾಟಕ ರಾಜ್ಯ ಸರ್ಕಾರದ ವೃತ್ತಿ ಶಿಕ್ಷಣ ಇಲಾಖೆ ನಡೆಸುವ "ಲ್ಯಾಂಡ್ ಅಂಡ್ ಸಿಟಿ ಸರ್ವೆ" ಯಲ್ಲಿ ಪದವಿ ಪೂರ್ವ ಡಿಪ್ಲೋಮಾದಲ್ಲಿ ಉತ್ತೀರ್ಣರಾಗಿರಬೇಕು ಅಥವಾ

D. ಕರ್ನಾಟಕ ಸರ್ಕಾರದ ಉದ್ಯೋಗ ಹಾಗೂ ತರಬೇತಿ ಇಲಾಖೆ ನಡೆಸುವ "ಐ.ಟಿ.ಐ. ಇನ್ ಸರ್ವೆ ಟ್ರೇಡ್" ನಲ್ಲಿ ಉತ್ತೀರ್ಣರಾಗಿರಬೇಕು ಅಥವಾ

E. ರಾಜ್ಯ ಸರ್ಕಾರದ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯಲ್ಲಿ ಅಥವಾ ಸರ್ವೆ ಆಫ್ ಇಂಡಿಯಾ ಅಥವಾ ಸರ್ಕಾರಿ ವಲಯಕ್ಕೆ ಒಳಪಟ್ಟ ಸಂಸ್ಥೆಗಳಲ್ಲಿ ಅಥವಾ ಖಾಸಗಿ ಸಂಸ್ಥೆಗಳಲ್ಲಿ ಕನಿಷ್ಠ 10 ವರ್ಷಗಳ ಭೂಮಾಪನ ಸೇವೆ ಸಲ್ಲಿಸಿ ನಿವೃತ್ತರಾದವರು ಸಹ ಪರವಾನಗಿ ಪಡೆಯಲು ಅರ್ಹರಿರುತ್ತಾರೆ.

ಈ ಬಗ್ಗೆ ಇದರೊಂದಿಗಿನ ಸರ್ಕಾರದ ಅಧಿಸೂಚನೆ **No.RD 143 Bhudasa 2012** ದಿನಾಂಕ **26-07-2013 (ತಿದ್ದುಪಡಿ-2013 ದಿನಾಂಕ:26-07-2013)** ವಿವರಣಾ ಪತ್ರದಲ್ಲಿನ ನಿಯಮ 46 (A- i ರಿಂದ v) ಗಳನ್ನು ಗಮನಿಸುವುದು.

7. **ವಯೋಮಿತಿ:**

ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು

- ಕನಿಷ್ಠ 18 ವರ್ಷ ವಯಸ್ಸು ಪೂರೈಸಿರತಕ್ಕದ್ದು.
- ಗರಿಷ್ಠ ವಯೋಮಿತಿ 65 ವರ್ಷಗಳು ಮೀರಿರಬಾರದು.
- ಈ ಬಗ್ಗೆ ಇದರೊಂದಿಗಿನ ಸರ್ಕಾರದ ಅಧಿಸೂಚನೆ **No.RD 143 Bhudasa 2012** ದಿನಾಂಕ **26-07-2013 (ತಿದ್ದುಪಡಿ-2013 ದಿನಾಂಕ:26-07-2013)** ವಿವರಣಾ ಪತ್ರದಲ್ಲಿನ ನಿಯಮ 46(A-2) ಅನ್ನು ಗಮನಿಸುವುದು.

**ಟಿಪ್ಪಣಿ:-** ಅಭ್ಯರ್ಥಿಗಳ ಜನ್ಮ ದಿನಾಂಕವನ್ನು ಅವರ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆಯ ಪ್ರಮಾಣ ಪತ್ರ / ವರ್ಗಾವಣೆ ಪ್ರಮಾಣ ಪತ್ರ (ಟಿ.ಸಿ.) / ಕ್ಯುಮುಲೇಟಿವ್ ರೆಕಾರ್ಡ್ ನಲ್ಲಿ ನಮೂದಿಸಿರುವಂತೆ ಪರಿಗಣಿಸಲಾಗುವುದು. ಇವುಗಳನ್ನು ಹೊರತುಪಡಿಸಿ ಇತರೆ ಯಾವುದೇ ದಾಖಲೆಗಳನ್ನು ಪರಿಗಣಿಸಲಾಗುವುದಿಲ್ಲ.



2/12/19

8. ಅರ್ಹತಾ ಷರತ್ತುಗಳು:

a. ಭಾರತೀಯ ನಾಗರಿಕನಾಗಿರತಕ್ಕದ್ದು.
b. ಅಭ್ಯರ್ಥಿಯು ಮಾನಸಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರು ನೇಮಕಾತಿಯಾದ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಅಡಚಣೆ ಉಂಟು ಮಾಡುವ ಸಂಭವವಿರುವ ಯಾವುದೇ ಮಾನಸಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.
c. ದೃಢಕಾಯವಾಗಿರುವ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ. ಭೂಮಾಪನ ಕಾರ್ಯ ಕೈಗೊಳ್ಳಬೇಕಿರುವುದರಿಂದ ಎಂತಹ ಮೇಲ್ಮೈ ಲಕ್ಷಣಗಳಿದ್ದರೂ ಅಳತೆ ಮಾಡುವ ದೈಹಿಕ ಸಾಮರ್ಥ್ಯ ಹೊಂದಿರಬೇಕು. (ಅರಣ್ಯ, ಎತ್ತರ/ತಗ್ಗು, ಜನ ಸಂಚಾರ ಇಲ್ಲದ ಪ್ರದೇಶ, ಹಳ್ಳ ಕೊಳ್ಳದ ಪ್ರದೇಶ ಇತ್ಯಾದಿ)
d. ಇಲಾಖೆಯಿಂದ ಈಗಾಗಲೇ ಪರವಾನಗಿ ಪಡೆದು ಕಾರ್ಯ ನಿರ್ವಹಿಸುತ್ತಿರುವವರು ಹಾಗೂ ಬೇರೆ ಕಾರಣಗಳಿಂದ ಪರವಾನಗಿ ರದ್ದಾಗಿದ್ದಲ್ಲಿ ಅಂತಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ. ಒಂದು ವೇಳೆ ಅಂತಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದಲ್ಲಿ ಅಂತಹವರ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
e. ಭೂದಾಖಲೆಗಳನ್ನು ಕನ್ನಡ ಭಾಷೆಯಲ್ಲಿ ತಯಾರಿಸಬೇಕಾದ ಕಾರಣ ಅಭ್ಯರ್ಥಿಯು ಎಸ್.ಎಸ್.ಎಲ್.ಸಿ / ತತ್ಸಮಾನ ಪರೀಕ್ಷೆಯಲ್ಲಿ ಕನ್ನಡ ಭಾಷೆಯನ್ನು ಪ್ರಥಮ / ದ್ವಿತೀಯ ಭಾಷೆಯಾಗಿ ಪಡೆದು ತೇರ್ಗಡೆ ಹೊಂದಿರಬೇಕು.

9. ಜಿಲ್ಲಾವಾರು ಅವಶ್ಯಕವಿರುವ ಪರವಾನಗಿ ಭೂಮಾಪಕರ ಸಂಖ್ಯೆ:

ಈ ಕೆಳಗೆ ನೀಡಿರುವ ಪಟ್ಟಿಯಂತೆ ವಿವಿಧ ಜಿಲ್ಲೆಗಳಿಗೆ ಪರವಾನಗಿ ಭೂಮಾಪಕರ ಅವಶ್ಯಕತೆ ಇರುತ್ತದೆ. ಪಟ್ಟಿಯಲ್ಲಿ ನೀಡಿರುವ ಜಿಲ್ಲೆಗಳು ಮತ್ತು ವಿತರಿಸಲಾಗುವ ಪರವಾನಗಿಗಳ ಸಂಖ್ಯೆಯು ಇಲಾಖೆಯ ಅವಶ್ಯಕತೆಗನುಗುಣವಾಗಿ ಬದಲಾವಣೆಗೊಳಪಟ್ಟಿರುತ್ತದೆ.

| ಕ್ರ.ಸಂ. | ಜಿಲ್ಲೆಯ ಹೆಸರು | ಅಗತ್ಯವಿರುವ ಪರವಾನಗಿ ಭೂಮಾಪಕರುಗಳ ಸಂಖ್ಯೆ |
|---|---|---|
| 1. | ಬೆಂಗಳೂರು ನಗರ | 42 |
| 2. | ಬೆಂಗಳೂರು ಗ್ರಾಮಾಂತರ | 92 |
| 3. | ಚಿಕ್ಕಬಳ್ಳಾಪುರ | 34 |
| 4. | ರಾಮನಗರ | 100 |
| 5. | ಕೋಲಾರ | 52 |
| 6. | ತುಮಕೂರು | 138 |
| 7. | ಶಿವಮೊಗ್ಗ | 45 |
| 8. | ದಾವಣಗೆರೆ | 78 |
| 9. | ಚಿತ್ರದುರ್ಗ | 70 |
| 10. | ಮೈಸೂರು | 41 |
| 11. | ಚಾಮರಾಜನಗರ | 14 |
| 12. | ಮಂಡ್ಯ | 110 |
| 13. | ಹಾಸನ | 120 |
| 14. | ಕೊಡಗು | 4 |
| 15. | ಉಡುಪಿ | 130 |
| 16. | ದಕ್ಷಿಣ ಕನ್ನಡ | 82 |

| ಕ್ರ.ಸಂ. | ಜಿಲ್ಲೆಯ ಹೆಸರು | ಅಗತ್ಯವಿರುವ ಪರವಾನಗಿ ಭೂಮಾಪಕರುಗಳ ಸಂಖ್ಯೆ |
|---|---|---|
| 17. | ಚಿಕ್ಕಮಗಳೂರು | 51 |
| 18. | ಬೆಳಗಾವಿ | 152 |
| 19. | ಬಾಗಲಕೋಟೆ | 47 |
| 20. | ವಿಜಯಪುರ | 104 |
| 21. | ಗದಗ್ | 58 |
| 22. | ಧಾರವಾಡ | 20 |
| 23. | ಉತ್ತರ ಕನ್ನಡ | 60 |
| 24. | ಹಾವೇರಿ | 30 |
| 25. | ಕಲ್ಬುರ್ಗಿ | 96 |
| 26. | ಬೀದರ್ | 49 |
| 27. | ರಾಯಚೂರು | 138 |
| 28. | ಕೊಪ್ಪಳ | 49 |
| 29. | ಯಾದಗಿರಿ | 56 |
| 30. | ಬಳ್ಳಾರಿ | 10 |
| | ಒಟ್ಟು | **2072** |

10. **ಆಯ್ಕೆಯ ವಿಧಾನಃ**

2 ವಿಷಯಗಳಲ್ಲಿ ತಲಾ 100 ಅಂಕಗಳಿಗೆ, ವಸ್ತುನಿಷ್ಟ ಬಹು ಆಯ್ಕೆಯ (**Objective Multiple Choice**) ಪ್ರಶ್ನೆಗಳನ್ನೊಳಗೊಂಡಂತೆ ಪ್ರತ್ಯೇಕ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಿಗದಿಪಡಿಸಿದ ಕೇಂದ್ರಗಳಲ್ಲಿ ರಾಜ್ಯದಲ್ಲಿ ಒಂದೇ ದಿನದಂದು OnlineTest ಮೂಲಕ ಅಥವಾ ಲಿಖಿತ ಪರೀಕ್ಷೆ ಮೂಲಕ ನಡೆಸಲಾಗುವುದು. ಉತ್ತರವನ್ನು OnlineTest ಮೂಲಕ ಅಥವಾ **OMR** ಶೀಟಿನಲ್ಲಿ ಗುರುತಿಸಬೇಕಾಗಿರುತ್ತದೆ. ಅಭ್ಯರ್ಥಿಗಳು ಈ ಪರೀಕ್ಷೆಯಲ್ಲಿ ಪಡೆಯುವ ಗರಿಷ್ಟ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. **ಈ ಆಯ್ಕೆಗೆ ಯಾವುದೇ ಸಂದರ್ಶನ ಇರುವುದಿಲ್ಲ.**

ಜಿಲ್ಲಾವಾರು ಮೆರಿಟ್ ಪಟ್ಟಿ ಮಾಡಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಅಭ್ಯರ್ಥಿಯು ಅರ್ಜಿ ಸಲ್ಲಿಸುವಾಗ ತಾನು ಆಯ್ಕೆ ಬಯಸುವ ಯಾವುದಾದರೂ ಒಂದು ಜಿಲ್ಲೆಯನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬಹುದು. ಆಯ್ಕೆ ಬಯಸಿದ ಜಿಲ್ಲೆಯನ್ನು ಹೊರತುಪಡಿಸಿ ಬೇರೆ ಜಿಲ್ಲೆಗೆ ಅಭ್ಯರ್ಥಿತನವನ್ನು ಪರಿಗಣಿಸುವುದಿಲ್ಲ.

(1) **ಸ್ಪರ್ಧಾತ್ಮಕ ಪರೀಕ್ಷೆ ವಿವರಃ (ಎಸ್.ಎಸ್.ಎಲ್.ಸಿ. ಜ್ಞಾನಮಟ್ಟಕ್ಕೆ)**

**ಪತ್ರಿಕೆ-1** (ಸಾಮಾನ್ಯ ಪತ್ರಿಕೆ) – 100 ಅಂಕಗಳು

**(General Paper)** – ಪರೀಕ್ಷಾ ಕಾಲಾವಧಿ – 2 ಗಂಟೆ

ಈ ಪತ್ರಿಕೆಯು ಕರ್ನಾಟಕದ ಹಾಗೂ ಭಾರತದ ಇತಿಹಾಸ, ರಾಜ್ಯಶಾಸ್ತ್ರ, ಸಾಮಾನ್ಯ ಜ್ಞಾನ ಹಾಗೂ ಇತ್ತೀಚಿನ ವಿದ್ಯಾಮಾನಗಳ ಅರಿವು, ಸಾಮಾನ್ಯ ವಿಜ್ಞಾನ ಹಾಗೂ ದಿನನಿತ್ಯದ ಆಗು-ಹೋಗುಗಳು ಮತ್ತು ಪ್ರಾಯೋಗಿಕ ಜ್ಞಾನದ ಕುರಿತಂತೆ ಪರೀಕ್ಷಾ ಪತ್ರಿಕೆಯಾಗಿರುತ್ತದೆ.

(2016 ರ ವರ್ಷದಲ್ಲಿ LS ಪರೀಕ್ಷೆಯಲ್ಲಿ ಉಪಯೋಗಿಸಿರುವ ಪ್ರಶ್ನೆ ಪತ್ರಿಕೆ ಅನುಬಂಧ-1 ರಲ್ಲಿ ನೀಡಲಾಗಿದೆ)



2/12/19

ಪತ್ರಿಕೆ-2 (ನಿರ್ದಿಷ್ಟ ಪತ್ರಿಕೆ) – 100 ಅಂಕಗಳು

**(Specific Paper)** – ಪರೀಕ್ಷಾ ಕಾಲಾವಧಿ - 2 ಗಂಟೆ

ಈ ಪತ್ರಿಕೆಯ ಪಠ್ಯಕ್ರಮವನ್ನು ಅನುಬಂಧ-2 ರಲ್ಲಿ ನೀಡಲಾಗಿದೆ. (ಹಾಗೂ 2016 ರ ವರ್ಷದಲ್ಲಿ ನಡೆಸಿರುವ LS ಪರೀಕ್ಷೆಯ ಪ್ರಶ್ನೆ ಪತ್ರಿಕೆ ಅನುಬಂಧ-3 ರಲ್ಲಿ ನೀಡಲಾಗಿದೆ)

11. **ತರಬೇತಿಃ**

a. ಆಯ್ಕೆಯಾದ ಅಭ್ಯರ್ಥಿಗಳು ರೂ.**5000/-** ತರಬೇತಿ ಶುಲ್ಕವನ್ನು ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಕೆ.ಆರ್.ವೃತ್ತ, ಬೆಂಗಳೂರು, ಇವರ ಹೆಸರಿನಲ್ಲಿ ಬೆಂಗಳೂರಿನಲ್ಲಿ ಪಾವತಿಯಾಗುವಂತೆ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕಿನಿಂದ ಕ್ರಾಸ್ ಮಾಡಿದ ಡಿ.ಡಿ.ಮೂಲಕ ಸಲ್ಲಿಸತಕ್ಕದ್ದು. ತಮ್ಮ ಸ್ವಂತ ಖರ್ಚಿನಲ್ಲಿ ತರಬೇತಿಗೆ ನಿಯೋಜಿಸಿದ ತರಬೇತಿ ಸಂಸ್ಥೆಯಲ್ಲಿ ಇಲಾಖೆಯು ನಡೆಸುವ 03 ತಿಂಗಳ ಭೂಮಾಪಕರ ವೃತ್ತಿ ಬುನಾದಿ ತರಬೇತಿಯನ್ನು ಯಶಸ್ವಿಯಾಗಿ ಪೂರೈಸತಕ್ಕದ್ದು.

b. ವೃತ್ತಿ ಬುನಾದಿ ತರಬೇತಿಯ ಅಂತಿಮದಲ್ಲಿ ನಡೆಸುವ ಪರೀಕ್ಷೆಯಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗತಕ್ಕದ್ದು. ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಮಾತ್ರ ಪರವಾನಗಿಯನ್ನು ವಿತರಿಸಲಾಗುವುದು.

12. **ಪರವಾನಗಿ ವಿತರಿಸುವ ವಿಧಾನ :**

a. ತರಬೇತಿಯಲ್ಲಿ ಉತ್ತೀರ್ಣರಾಗುವ ಅಭ್ಯರ್ಥಿಗಳು ರೂ.**1000/-** ಪರವಾನಗಿ ಶುಲ್ಕವನ್ನು ಪಾವತಿಸಿ ಪರವಾನಗಿ ಪತ್ರ ಮತ್ತು ಪರವಾನಗಿ ಗುರುತಿನ ಚೀಟಿಯನ್ನು ಪಡೆಯಬಹುದಾಗಿರುತ್ತದೆ.

b. ಅಭ್ಯರ್ಥಿಗಳು ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ಪ್ರಮಾಣ ಪತ್ರಗಳನ್ನು / ದಾಖಲಾತಿಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಅಂದರೆ ದಿನಾಂಕ: **21.01.2020** ರೊಳಗೆ ಪಡೆದಿರಬೇಕು ಮತ್ತು ಸಿಂಧುವಾಗಿರಬೇಕು ಹಾಗೂ ಇಲಾಖೆಯು ಪರಿಶೀಲನೆಗಾಗಿ ಹಾಜರುಪಡಿಸಲು ಸೂಚಿಸಿದಾಗ ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅನರ್ಹ ಅಭ್ಯರ್ಥಿ ಎಂದು ಪರಿಗಣಿಸಲಾಗುವುದು.

c. ಅಭ್ಯರ್ಥಿಯು ಆಯ್ಕೆಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಹೊಂದಿರುವ ಬಗ್ಗೆ ಪ್ರಮಾಣ ಪತ್ರಗಳು ಮತ್ತು ಜನ್ಮ ದಿನಾಂಕವನ್ನು ದೃಢೀಕರಿಸುವ ದಾಖಲೆಗಳನ್ನು ಪರಿಶೀಲನಾ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು. ಹಾಜರುಪಡಿಸದಿದ್ದಲ್ಲಿ ಅಭ್ಯರ್ಥಿಯ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

d. ಅಭ್ಯರ್ಥಿಗಳು ತಾವು ಸಲ್ಲಿಸಿದ ಜಿಲ್ಲೆಗಳಿಗೆ ಆಯ್ಕೆಯಾದ ನಂತರ ಆಯಾ ಜಿಲ್ಲೆಯ ವ್ಯಾಪ್ತಿಗೆ ಬರುವಂತಹ ತಾಲ್ಲೂಕುಗಳಿಗೆ ಕಾರ್ಯಕ್ಷೇತ್ರ ನಿಗದಿಪಡಿಸಿ ಪರವಾನಗಿಯನ್ನು ನೀಡಲಾಗುವುದು. **ಯಾವುದೇ ಕಾರಣಕ್ಕೂ ರಾಜ್ಯದ ಇತರೆ ಜಿಲ್ಲೆಗಳಿಗೆ ಕಾರ್ಯಕ್ಷೇತ್ರವನ್ನು ಬದಲಾವಣೆ ಮಾಡಲು ಅವಕಾಶ ಇರುವುದಿಲ್ಲ.** ವಿವರಣಾ ಪತ್ರದಲ್ಲಿನ ನಿಯಮ 46-ಎಫ್ ನ್ನು ಗಮನಿಸುವುದು.

13. **ಪರಿಶೀಲನಾ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸಬೇಕಾದ ಪ್ರಮಾಣ ಪತ್ರಗಳುಃ**

- ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯಂತೆ ಅರ್ಜಿಯಲ್ಲಿ ನಮೂದಿಸಿದ ಮೂಲ ಅಂಕಪಟ್ಟಿಗಳು.
- ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ / ವರ್ಗಾವಣೆ ಪ್ರಮಾಣ ಪತ್ರ (ಟಿ.ಸಿ.) / ಸಂಚಿತ ದಾಖಲೆ (Cumulative Record) ಗಳ ಮೂಲ ಪತ್ರಗಳು.

21/12/19

14. **ಪ್ರಮುಖ ಸೂಚನೆಗಳು:**

i. ಅಭ್ಯರ್ಥಿಗಳು ಅರ್ಜಿಯಲ್ಲಿ ನೀಡುವ ಮಾಹಿತಿಗಳ ಆಧಾರದ ಮೇಲೆ, ಸ್ಪರ್ಧಾತ್ಮಕ ಪರೀಕ್ಷೆಯನ್ನು ಬರೆಯಲು ಅರ್ಹರೆಂದು ಕಂಡು ಬಂದ ಅಭ್ಯರ್ಥಿಗಳಿಗೆ ಮಾತ್ರ ಲಿಖಿತ ಪರೀಕ್ಷೆಗೆ ಪ್ರವೇಶ ಪತ್ರಗಳನ್ನು ವೆಬ್ ಸೈಟ್ ನಿಂದ ಪಡೆಯಲು ಅವಕಾಶ ಕಲ್ಪಿಸಲಾಗುವುದು. ಆದ್ದರಿಂದ ನಿಗದಿಪಡಿಸಿರುವ ವಯೋಮಿತಿ, ವಿದ್ಯಾರ್ಹತೆ, ಇತ್ಯಾದಿಗಳಿಗೆ ಅನುಗುಣವಾಗಿ ಅರ್ಜಿಯಲ್ಲಿ ಸರಿಯಾದ ಮಾಹಿತಿ ನೀಡುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ.

ii. ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಭ್ಯರ್ಥಿಯು ಅರ್ಜಿಯಲ್ಲಿ ನಮೂದಿಸುವ ಜನ್ಮ ದಿನಾಂಕ, ವಿದ್ಯಾರ್ಹತೆ, ಪರೀಕ್ಷಾ ಕೇಂದ್ರ ಹಾಗೂ ಇತ್ಯಾದಿ ವಿವರಗಳನ್ನು ಅಂತಿಮವೆಂದು ಭಾವಿಸಿ ಅದರಂತೆ ಪರಿಗಣಿಸಲಾಗುವುದು. ಆ ನಂತರದಲ್ಲಿ ಬದಲಾವಣೆ ಕುರಿತಂತೆ ಸಲ್ಲಿಸುವ ಯಾವುದೇ ಕೋರಿಕೆ ಪತ್ರಗಳನ್ನು ಪುರಸ್ಕರಿಸಲಾಗುವುದಿಲ್ಲ.

iii. ಯಾವುದೇ ಹಂತದಲ್ಲಿ ವಿಳಾಸ ಬದಲಾವಣೆಯಾಗಿದ್ದಲ್ಲಿ ಅಭ್ಯರ್ಥಿಗಳು ಲಿಖಿತವಾಗಿ ಇಲಾಖಾ ಮುಖ್ಯಸ್ಥರ ಗಮನಕ್ಕೆ ತರತಕ್ಕದ್ದು. ಈ ವಿಳಾಸ ಬದಲಾವಣೆಯನ್ನು ಪರಿಗಣಿಸಲು ಪ್ರಯತ್ನಿಸಲಾಗುವುದು. ಆದಾಗ್ಯೂ ಈ ವಿಚಾರದಲ್ಲಿ ಇಲಾಖೆಯು ಯಾವುದೇ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಿಲ್ಲ. ಅರ್ಜಿ ಸಲ್ಲಿಸುವಾಗ ನೀಡಿರುವ ವಿಳಾಸದಿಂದ ಅಂಚೆ ಪತ್ರಗಳನ್ನು ಪಡೆದುಕೊಳ್ಳುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ. ಈ ಬಗ್ಗೆ ಅಭ್ಯರ್ಥಿಗಳು ಎಚ್ಚರವಹಿಸತಕ್ಕದ್ದು.

iv. ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ ಆ ದಿನಾಂಕದ ಮಾರನೆಯ ಕೆಲಸದ ದಿನವು ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗುವುದು.

15. **ಪ್ರವೇಶ ಪತ್ರ:**

ಇಲಾಖೆಯಿಂದ ಅಭ್ಯರ್ಥಿಗಳಿಗೆ ಯಾವುದೇ ಪ್ರವೇಶ ಪತ್ರವನ್ನು ನೀಡುವುದಿಲ್ಲ. ವೆಬ್ ಸೈಟಿನಲ್ಲಿ ಸ್ಪರ್ಧಾತ್ಮಕ ಪರೀಕ್ಷಾ ವೇಳಾಪಟ್ಟಿ ಮತ್ತು ಪರೀಕ್ಷಾ ಕೇಂದ್ರವನ್ನು 15 ದಿನಗಳ ಮುಂಚಿತವಾಗಿ ಪ್ರಕಟಿಸಲಾಗುವುದು. ಪರೀಕ್ಷೆ ಬರೆಯಲು ಹಾಜರಾಗುವ ಅಭ್ಯರ್ಥಿಗಳು ಅರ್ಜಿಯ ಪ್ರತಿ, ಸ್ವೀಕೃತಿ ಪತ್ರ ಮತ್ತು ಅರ್ಜಿಯಲ್ಲಿ ನಮೂದಿಸಿದ ಅಭ್ಯರ್ಥಿಯ ಆಧಾರ್ ಕಾರ್ಡ್ ಅಥವಾ ಚುನಾವಣಾ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರತಕ್ಕದ್ದು. ಪ್ರವೇಶ ಪತ್ರದಲ್ಲಿ ತಮ್ಮ ಭಾವಚಿತ್ರ ಅಂಟಿಸಿ (ದ್ವಿಪ್ರತಿಯಲ್ಲಿ) ಪತ್ರಾಂಕಿತ ಅಧಿಕಾರಿಯಿಂದ ಧೃಡೀಕರಿಸಿಕೊಂಡು ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗುವುದು.

16. **ಇಲಾಖೆಯೊಡನೆ ಪತ್ರ ವ್ಯವಹಾರ:**

ಈ ಪ್ರಕಟಣೆಯಲ್ಲಿ ಹೊರಡಿಸಿರುವ ಅಂಶಗಳಲ್ಲಿ ಯಾವುದೇ ಸಂಶಯವಿದ್ದಲ್ಲಿ ಈ ಕೆಳಗಿನ ದೂರವಾಣಿ ಸಂಖ್ಯೆಗೆ ಸರ್ಕಾರಿ ಕೆಲಸ ದಿನಗಳಲ್ಲಿ ಬೆಳಿಗ್ಗೆ 10-00 ರಿಂದ ಸಂಜೆ 5-30 ರವರೆಗೆ ಸಂಪರ್ಕಿಸತಕ್ಕದ್ದು.

**ದೂರವಾಣಿ ಸಂಖ್ಯೆ : 080-22221038**

17. **ಅನರ್ಹತೆ:**

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಈ ಮುಂದೆ ನಮೂದಿಸಿದಂತೆ ಯಾವುದೇ ರೀತಿಯ ದುರ್ನಡತೆ / ಅಕ್ರಮ /ಅನುಚಿತ ವರ್ತನೆ ಹಾಗೂ ಸರ್ಕಾರಿ ಸೇವೆಯಿಂದ ವಜಾಗೊಂಡಿದ್ದಲ್ಲಿ ಅಂತಹವರ ಅಭ್ಯರ್ಥಿತ್ವವನ್ನು ಅನರ್ಹಗೊಳಿಸಲಾಗುವುದು ಹಾಗೂ ಕ್ರಿಮಿನಲ್ ವ್ಯವಹರಣೆಗಳಿಗೆ ಒಳಪಡಿಸಲಾಗುವುದು.

1. ಯಾವುದೇ ಅಭ್ಯರ್ಥಿಯು ನಕಲು ವ್ಯಕ್ತಿಯಾಗಿದ್ದಲ್ಲಿ
2. ಖೋಟಾ ದಸ್ತಾವೇಜು / ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿದ್ದಲ್ಲಿ
3. ತಪ್ಪು ಅಥವಾ ಸುಳ್ಳು ಹೇಳಿಕೆ / ಮಾಹಿತಿ ನೀಡಿದಲ್ಲಿ
4. ವಾಸ್ತವಿಕ ಮಾಹಿತಿಯನ್ನು ಮರೆಮಾಚಿದಲ್ಲಿ
5. ನೀಡಲಾದ ಯಾವುದೇ ಸೂಚನೆಗಳನ್ನು ಉಲ್ಲಂಘಿಸಿರುವನೆಂದು ಕಂಡು ಬಂದಲ್ಲಿ; ಅಂತಹವರ ಅಭ್ಯರ್ಥಿತ್ವವನ್ನು ಅನರ್ಹಗೊಳಿಸಲಾಗುವುದು.



2/11/2/19

18. ಪರವಾನಗಿ ಭೂಮಾಪಕರಾಗಿ ಕೆಲಸ ನಿರ್ವಹಿಸುವ ಬಗ್ಗೆ ನಿಯಮಗಳು :

i. ಪರವಾನಗಿಯನ್ನು ಪಡೆಯುವ ಅಭ್ಯರ್ಥಿಗಳು ಇಲಾಖಾ ಆಯುಕ್ತರು ನಿಗದಿಪಡಿಸುವ ಪರವಾನಗಿ ಶುಲ್ಕವನ್ನು ಪಾವತಿಸಿದ ನಂತರ ಪರವಾನಗಿಯನ್ನು ಪಡೆಯಬಹುದಾಗಿರುತ್ತದೆ.

ii. ಪರವಾನಗಿಯು ಪರವಾನಗಿ ಪಡೆದ ನಂತರದ ದಿನಾಂಕದಿಂದ ಒಂದು ವರ್ಷದ ಅವಧಿಯವರೆವಿಗೂ ಚಾಲ್ತಿಯಲ್ಲಿರುತ್ತದೆ.

iii. ಒಂದು ವರ್ಷದ ನಂತರದ ಅವಧಿಗೆ ಪರವಾನಗಿಯನ್ನು ನವೀಕರಿಸಿಕೊಳ್ಳಲು ಪರವಾನಗಿ ಭೂಮಾಪಕರು ಪರವಾನಗಿ ಅವಧಿಯು ಅಂತಿಮಗೊಳ್ಳುವ ಒಂದು ತಿಂಗಳು ಮುಂಚಿತವಾಗಿ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಮತ್ತು ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರಿಗೆ ಇಲಾಖೆಯು ನಿಗದಿಪಡಿಸಿರುವ ನವೀಕರಣ ಶುಲ್ಕವನ್ನು ಪಾವತಿಸಿ ಅರ್ಜಿಯನ್ನು ನೀಡತಕ್ಕದ್ದು.

iv. ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಮತ್ತು ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರು ಪರವಾನಗಿ ಭೂಮಾಪಕರ ಕೆಲಸದ ಗುಣಮಟ್ಟ ತೃಪ್ತಿಕರವೆಂದು ಸಮೀಕ್ಷಿಸಿದ ಅಥವಾ ಇಲಾಖೆಯು ಜಾರಿಗೊಳಿಸಿರುವ **Continuous Evaluation Mechanism** ಮುಖಾಂತರ ಸಮೀಕ್ಷಿಸಿ ಪರವಾನಗಿಯನ್ನು ನವೀಕರಿಸುವರು.

v. ಪರವಾನಗಿ ಭೂಮಾಪಕರು ಇಲಾಖೆಯು ನಿಗದಿಪಡಿಸಿರುವ ಗುರಿಯಂತೆ ಕೆಲಸ ನಿರ್ವಹಿಸದಿದ್ದಲ್ಲಿ, ಅಂತಹವರು ಕನಿಷ್ಟ 3 ತಿಂಗಳುಗಳ ಪುನಶ್ಚೇತನ ತರಬೇತಿಯನ್ನು ಆಯುಕ್ತರು ಸೂಚಿಸುವ ಇಲಾಖಾ ತರಬೇತಿ ಸಂಸ್ಥೆಯಲ್ಲಿ ಅವರ ಸ್ವಂತ ಖರ್ಚಿನಿಂದ ಪಡೆಯಬೇಕಾಗಿರುತ್ತದೆ. ಪರವಾನಗಿಯನ್ನು ಮುಂದುವರೆಸುವ ಬಗ್ಗೆ ಅಥವಾ ಅರ್ಜಿದಾರರಿಗೆ ಉಂಟಾಗುವ ನಷ್ಟವನ್ನು ಪರವಾನಗಿ ಭೂಮಾಪಕರಿಂದ ವಸೂಲಾತಿ ಮಾಡುವ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ ಇಲಾಖಾ ಆಯುಕ್ತರು ತೀರ್ಮಾನಿಸುತ್ತಾರೆ.

vi. ಪರವಾನಗಿ ಭೂಮಾಪಕರಿಗೆ ಪರವಾನಗಿಯನ್ನು ವಿತರಿಸುವ ಸಮಯದಲ್ಲಿ ಒಮ್ಮೆ ನಿಗದಿಪಡಿಸುವ ಕಾರ್ಯಕ್ಷೇತ್ರವನ್ನು ಯಾವುದೇ ಸಂದರ್ಭದಲ್ಲಿಯೂ ಬದಲಾವಣೆ ಮಾಡಲಾಗುವುದಿಲ್ಲ.

vii. ಪರವಾನಗಿ ಭೂಮಾಪಕರಿಗೆ ನಿಗದಿಪಡಿಸಿರುವ ಕೆಲಸದ ವಿವರವನ್ನು ಸರ್ಕಾರದ ಅಧಿಸೂಚನೆ NO.RD 143 Bhudasa 2012 Date: 26-07-2013 ರಲ್ಲಿ ನಿಯಮ 46(G) ಮತ್ತು 46(H) ರಲ್ಲಿ ನೀಡಲಾಗಿದೆ.

viii. ಪರವಾನಗಿ ಭೂಮಾಪಕರು ಕರ್ನಾಟಕ ಭೂಕಂದಾಯ ಅಧಿನಿಯಮ 1964 ಮತ್ತು ನಿಯಮಗಳು 1966 (ತಿದ್ದುಪಡಿ-2013-ದಿನಾಂಕ:26-07-2013) ರಲ್ಲಿನ ನಿಯಮಗಳನ್ನು ಅಥವಾ ಇಲಾಖಾ ಸುತ್ತೋಲೆ / ಸೂಚನೆಗಳನ್ನು ಉಲ್ಲಂಘಿಸಿದಲ್ಲಿ, ಕಾರಣ ಕೇಳಿ ನೋಟೀಸು ನೀಡಿ, ಪರವಾನಗಿ ಭೂಮಾಪಕರ ಸಮಜಾಯಿಷಿಯನ್ನು ಅವಲೋಕಿಸಿದ ನಂತರ ಪರವಾನಗಿಯನ್ನು ಅಮಾನತ್ತಿನಲ್ಲಿಡಬಹುದಾಗಿರುತ್ತದೆ.

ix. ಪರವಾನಗಿ ಭೂಮಾಪಕರ ಪರವಾನಗಿಯನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಮತ್ತು ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರು ಅಮಾನತ್ತುಗೊಳಿಸುವ ಪ್ರಾಧಿಕಾರವನ್ನು ಹೊಂದಿರುತ್ತಾರೆ.

x. ಪರವಾನಗಿ ಭೂಮಾಪಕರು ಕರ್ನಾಟಕ ಭೂಕಂದಾಯ ಅಧಿನಿಯಮ 1964 ಮತ್ತು ನಿಯಮಗಳು 1966 (ತಿದ್ದುಪಡಿ-2013-ದಿನಾಂಕ:26-07-2013) ರಲ್ಲಿನ ನಿಯಮಗಳನ್ನು ಅಥವಾ ಇಲಾಖಾ ಸುತ್ತೋಲೆ / ಸೂಚನೆಗಳನ್ನು ಉಲ್ಲಂಘಿಸಿದಲ್ಲಿ / 4 ತಿಂಗಳು ಸತತವಾಗಿ ಗೈರುಹಾಜರಾಗಿ ಉಳಿದಲ್ಲಿ / ಸರ್ಕಾರ ನಿಗದಿಪಡಿಸಿರುವ ಸೇವಾಶುಲ್ಕಕ್ಕಿಂತ ಅರ್ಜಿದಾರರಿಂದ ಹೆಚ್ಚು ಹಣವನ್ನು ಪಡೆದಲ್ಲಿ / ಯಾವುದೇ ಸರ್ಕಾರಿ ಇಲಾಖೆಯಿಂದ ದುರ್ನಡತೆ ಬಗ್ಗೆ ವಿಚಾರಣೆಗೆ ಒಳಪಟ್ಟಿರುವುದು ಕಂಡುಬಂದಲ್ಲಿ / ಕಾರ್ಯಕ್ಷೇತ್ರ ಬದಲಾವಣೆಗಾಗಿ ಅಪೇಕ್ಷಿಸಿದ ಸಂದರ್ಭಗಳಲ್ಲಿ ಕಾರಣ ಕೇಳಿ ನೋಟೀಸು ನೀಡಿ, ಪರವಾನಗಿ ಭೂಮಾಪಕರ ಸಮಜಾಯಿಷಿಯನ್ನು ಅವಲೋಕಿಸಿದ ನಂತರ ಪರವಾನಗಿಯನ್ನು ರದ್ದು ಪಡಿಸಲಾಗುವುದು.

ಆಯುಕ್ತರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳ ಇಲಾಖೆ, ಬೆಂಗಳೂರು.